KAKP030020282019

Digitally signed by TRIVENI MAHADEV IRAGAR
Date: 2026.06.24 17:49:02 +0530

TRIVENI MAHADEV IRAGAR

**1 ನೇ ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕೊಪ್ಪಳ.**

**ಉಪಸ್ಥಿತರು:**

**ಶ್ರೀಮತಿ. ತ್ರಿವೇಣಿ ಈರಗಾರ,**
**ಬಿ.ಕಾಂ., ಎಲ್.ಎಲ್.ಬಿ.,**
**1 ನೇ ಹೆ.ಪ್ರ.ದ. ನ್ಯಾಯಾಧೀಶರು**
**& ಜೆ.ಎಂ.ಎಫ್.ಸಿ., ಕೊಪ್ಪಳ.**

ಇಂದು ದಿನಾಂಕ: **22 ನೇ ಜೂನ್ 2026**

**ಸಿ.ಸಿ. ನಂ: 1146/2019**
(ಅಪರಾದ ಸಂಖ್ಯೆ:0109/2019)

**ಫಿರ್ಯಾದುದಾರರು :** ಕೊಪ್ಪಳ ಗ್ರಾಮೀಣ ಪೊಲೀಸ ಠಾಣೆ

**(ಸರ್ಕಾರಿ ಸಹಾಯಕ ಅಭಿಯೋಜಕರು)**

// ವಿರುದ್ಧ //

**ಆರೋಪಿ :** ಈರಣ್ಣ ತಂದೆ ನಾಗಪ್ಪ ಹುನಗುಂದ,
ವಯಃ 43 ವರ್ಷ, ಉಃ ಪೋಲೀಸ್ ಆಫೀಸರ್,
ಸಾ: ದಾರಿ ಯುನಿಟ್, ಜಿ: ಕೊಪ್ಪಳ.

**(ಶ್ರೀ ವೈ.ಜೆ.ಆರ್. ವಕೀಲರು)**

| | |
|---|---|
| ಕೃತ್ಯ ನಡೆದ ದಿನಾಂಕ | 14-05-2019 |
| ಪ್ರ.ವ.ವರದಿಯ ದಿನಾಂಕ | 14-05-2019 |

| | |
|---|---|
| ಅಂತಿಮ ವರದಿ ದಿನಾಂಕ | 14-05-2019 |
| ದೋಷಾರೋಪಣಾ ತಯಾರಿಸಿದ ದಿನಾಂಕ | 16-11-2022 |
| ಸಾಕ್ಷ್ಯವಿಚಾರಣೆ ಪ್ರಾರಂಭಿಸಿದ ದಿನಾಂಕ | 28-06-2023 |
| ಆದೇಶಕ್ಕೆ ಇಟ್ಟ ದಿನಾಂಕ | 16-06-2026 |
| ತೀರ್ಪು ನೀಡಿದ ದಿನಾಂಕ | 22-06-2026 |
| ದಂಡವಿಧಿಸಿದ ದಿನಾಂಕ ಇದ್ದಲ್ಲಿ | 22.06.2026 |

| ಆರೋಪಿಯ ಪ್ರ. ಸಂ | ಆರೋಪಿಯ ಹೆಸರು | ದಸ್ತಗಿರಿ ಮಾಡಿದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | ದೋಷಾರೋಪಣಾ ಕಲಂಗಳು | ದಂಢಿಸಲಾಯಿತೆ ಅಥವಾ ಬಿಡುಗಡೆಗೊಳಿಸಲಾಯಿತೆ | ದಂಢವಿಧಿಸಿದ ರೀತಿ | ಕಲಂ 428 ರ ಅಡಿಯಲ್ಲಿ ಆರೋಪಿಯನ್ನು ನ್ಯಾಯಾಲಯದ ಬಂಧನದಲ್ಲಿ ವಿಚಾರಣ ಸಮಯದಲ್ಲಿ ಇಧಿಸಿದ ಅವಧಿ |
|---|---|---|---|---|---|---|---|
| 1 | ಈರಣ್ಣ | ಇಲ್ಲ | ಇಲ್ಲ | 279 & 337 ಐಪಿಸಿ | ದಂಡವಿದಿಸಲಾಗಿದೆ | ನಗದು ರೂ. 1500/- | ಇಲ್ಲ |

**<u>ತೀರ್ಪು</u>**

1. ಸಿಡಬ್ಲ್ಯೂ-10 ಆರಕ್ಷಕ ವೃತ್ತ ನಿರೀಕ್ಷಕರು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ರವರು ಪ್ರಸ್ತುತ ದೋಷಾರೋಪಣೆ ಪಟ್ಟಿಯನ್ನು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 337ರ ಐಪಿಸಿ ಅಡಿಯಲ್ಲಿನ ಅಪರಾಧಗಳಿಗಾಗಿ ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ: ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಕೊಪ್ಪಳ-ಕುಷ್ಟಗಿ ರಸ್ತೆಯ ಹಟ್ಟಿ ಕ್ರಾಸ ಹತ್ತಿರ ದಿನಾಂಕ 14.05.2019 ರಂದು ಸಾಯಂಕಾಲ

06-40 ಗಂಟೆಯ ಸುಮಾರಿಗೆ ಆರೋಪಿತನು ತನ್ನ ಸರ್ಕಾರಿ ಪೋಲೀಸ್ ವಾಹನ ಸಂಖ್ಯೆಃ ಕೆಎ-37/ಜಿ-0348 ನೇದ್ದರಲ್ಲಿ ಚಾಸಾ-4, 5 ರವರು ಕೂಡಿಸಿಕೊಂಡು ಇರಕಲಗಡಾ ಕಡೆಯಿಂದ ಕೊಪ್ಪಳ ಕಡೆಗೆ ಅತೀವೇಗ ಮತ್ತು ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೊರಟಿದ್ದ ಚಾಸಾ-1 ರವರ ಎತ್ತಿನ ಬಂಡಿಯ ಹಿಂದೆ ಅಂತರವನ್ನು ಕಾಯ್ದುಕೊಳ್ಳದೆ ಹಿಂಬದಿಗೆ ಜೋರಾಗಿ ಅಪಘಾತ ಮಾಡಿದ್ದರಿಂದ ಚಾಸಾ-1 ರವರಿಗೆ ಸಾದಾ ಸ್ವರೂಪದ ಗಾಯವಾಗಿದ್ದು ಮತ್ತು ಈ ಅಪಘಾತದಲ್ಲಿ ಎತ್ತಿನ ಬಂಡಿಗೆ ಹೂಡಿದ್ದ ಒಂದು ಎತ್ತು ಸಹ ಮೃತಪಟ್ಟಿದ್ದು ಇರುತ್ತದೆ. ಆ ಪ್ರಕಾರ ಆರೋಪಿ ಐ.ಪಿ.ಸಿ ಕಲಂ ಕಲಂ 279 ಮತ್ತು 337 ರ ಐಪಿಸಿ ಅಡಿಯಲ್ಲಿ ಶಿಕ್ಷೆ ಅರ್ಹವಾದ ಅಪರಾದಗಳನ್ನು ಎಸಗಿರುತ್ತಾನೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ಕಾಣಿಸಿದ ಅಪರಾದಗಳಿಗೆ ಸಂಜ್ಞೆಯತೇಯನ್ನು ತೆಗೆದುಕೊಂಡು ಆರೋಪಿ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ನಂತರ ಆರೋಪಿ ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಬಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತನೇ ಮೇಲ್ಕಾಣಿಸಿ ಕಲಂ ಅನ್ವಯ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿ ತಾನು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

4. ಆರೋಪಿ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾದಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು 10 ಸಾಕ್ಷಿದಾರರ ಪೈಕಿ ಪ್ರಾಸಾ-1 ರಿಂದ 9 ರವರನ್ನು ವಿಚಾರಣೆಯಲ್ಲಿ ವಿಚಾರಣೆಗೆ

ಒಳಪಡಿಸಿಕೊಂಡು, 10 ದಾಖಲೆಗಳನ್ನು ನಿಶಾನೆ ಪಿ-1 ರಿಂದ ಪಿ-10 ಎಂದು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರನ್ವಯ ವಿಚಾರಣೆಗೊಳಪಡಿಸಿದ್ದು, ಆರೋಪಿತರು ತಮ್ಮ ವಿಚಾರಣಾ ಸಮಯದಲ್ಲಿ ಅಭಿಯೋಗ ಪರ ಸಾಕ್ಷಿದಾರರ ನುಡಿದಿರುವಂತಹ ಸಾಕ್ಷ್ಯವನ್ನು ಅಲ್ಲಗಳೆದು, ತಮ್ಮ ಪರ ಯಾವುದೇ ಪ್ರತಿರಕ್ಷೆ ಸಾಕ್ಷ್ಯವಿಲ್ಲವೆಂದು ನುಡಿದಿರುತ್ತಾರೆ ಮತ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

5. ಅಭಿಯೋಜನೆಯ ಪರ ಸಾಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

6. ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪ್ರಾಜ್ಞ ವಕೀಲರ ವಾದ ವಿವಾದವನ್ನು ಆಲಿಸಿದ್ದೇನೆ. ಕಡತವನ್ನು, ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಿದ್ದೇನೆ. ನಾನು ಗಮನಿಸಿ ತೀರ್ಮಾನಿಸಲು ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1) ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಕೊಪ್ಪಳ-ಕುಷ್ಟಗಿ ರಸ್ತೆಯ ಹಟ್ಟಿ ಕ್ರಾಸ ಹತ್ತಿರ ದಿನಾಂಕ 14.05.2019 ರಂದು ಸಾಯಂಕಾಲ 06-40 ಗಂಟೆಯ ಸುಮಾರಿಗೆ ಆರೋಪಿತನು ತನ್ನ ಸರ್ಕಾರಿ ಪೋಲೀಸ್ ವಾಹನ ಸಂಖ್ಯೆ ಕೆಎ-37/ಜಿ-0348 ನೇದ್ದರಲ್ಲಿ ಚಾಸಾ-4, 5 ರವರು ಕೂಡಿಸಿಕೊಂಡು ಇರಕಲಗಡಾ ಕಡೆಯಿಂದ ಕೊಪ್ಪಳ ಕಡೆಗೆ ಅತೀವೇಗ ಮತ್ತು ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೊರಟಿದ್ದ ಚಾಸಾ-1 ರವರ ಎತ್ತಿನ ಬಂಡಿಯ ಹಿಂದೆ ಅಂತರವನ್ನು ಕಾಯ್ದುಕೊಳ್ಳದೆ ಹಿಂಬದಿಗೆ ಜೋರಾಗಿ ಅಪಘಾತ ಮಾಡಿದ್ದರಿಂದ ಚಾಸಾ-1 ರವರಿಗೆ ಸಾದಾ ಸ್ವರೂಪದ ಗಾಯವಾಗಿದ್ದು ಮತ್ತು

ಈ ಅಪಘಾತದಲ್ಲಿ ಎತ್ತಿನ ಬಂಡಿಗೆ ಹೂಡಿದ್ದ ಒಂದು ಎತ್ತು ಸಹ ಮೃತಪಟ್ಟಿದ್ದು, ಆ ಪ್ರಕಾರ ಆರೋಪಿ ಐ.ಪಿ.ಸಿ ಕಲಂ 279 ಮತ್ತು 337ರ ಅಡಿಯಲ್ಲಿನ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜಕರು ರುಜುವಾತುಪಡಿಸಿರುವರೇ?

2) ಏನು ಆದೇಶ?

7. ಮೇಲಿನ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಕಂಡಂತೆ ಇರುತ್ತದೆ.

ಅಂಶ 1 : ಸಕಾರಾತ್ಮಕವಾಗಿ,

ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

8. **ಅಂಶ 1 :** ಪ್ರಾಸ್ಯೂಕ್ಯೂಷನ್ ಪಿ ಪಿಡಬ್ಲ್ಯೂ-1 ಪಿರ್ಯಾದಿ, ಪಿಡಬ್ಲ್ಯೂ-2 ಮತ್ತು 3 ಸ್ಥಳ ಪಂಚ ಸಾಕ್ಷಿಗಳು, ಪಿಡಬ್ಲ್ಯೂ-4, 5 ಮತ್ತು 7 ಇತರ ಸಾಕ್ಷಿಗಳು, ಪಿಡಬ್ಲ್ಯೂ-6 ಗಾಯದ ವರದಿ ನೀಡಿದ ಸಾಕ್ಷಿ, ಪಿಡಬ್ಲ್ಯೂ-8 ಎಮ್.ವಿ ವರದಿ ನೀಡಿದ ಸಾಕ್ಷಿ, ಮತ್ತು ಪಿಡಬ್ಲ್ಯೂ-9 ಇತರ ಸಾಕ್ಷಿದಾರರಾಗಿರುತ್ತಾರೆ. ಸದರಿ ಪಿಡಬ್ಲ್ಯೂ-2 ಮತ್ತು 3 ಸ್ಥಳ ಪಂಚ ಸಾಕ್ಷಿ ಮತ್ತು ಪಿಡಬ್ಲ್ಯೂ-7 ಇತರ ಸಾಕ್ಷಿದಾರರು ಪ್ರಾಸಿಕ್ಯೂಷನ್ ಕೇಸಿನ ಸಾರಾಂಶಕ್ಕೆ ಪೂರಕವಾಗಿ ಬೆಂಬಲಿಸಿ ಸಾಕ್ಷಿವಿಚಾರಣೆ ನುಡಿದಿಲ್ಲ. ಬದಲಾಗಿ ಪ್ರತಿಕೂಲ ಸಾಕ್ಷಿಯಾಗಿ ನಿಪಿ-2 ಮತ್ತು 4ರ ಸಂಗತಿಗಳನ್ನು ಕ್ರಮವಾಗಿ ನಿರಾಕರಿಸಿರುತ್ತಾರೆ. ಉಳಿದಂತೆ ಪಿಡಬ್ಲ್ಯೂ-1, 4 ರಿಂದ 6, 8 ಮತ್ತು 9 ಇತರ ಸಾಕ್ಷಿ ಹಾಗೂ ಇಲಾಖಾ ಸಿಬ್ಬಂದಿ ಸಾಕ್ಷಿದಾರರು ಪ್ರಾಸಿಕ್ಯೂಷನ್ ಕೇಸಿನ ಸಾರಾಂಶಕ್ಕೆ ಪೂರಕವಾಗಿ ಬೆಂಬಲಿಸಿ ಸಾಕ್ಷಿವಿಚಾರಣೆ ನುಡಿದಿದ್ದು ನಿಪಿ-1, 3, 5 ಮತ್ತು 8 ರಿಂದ 10ರ ಸಂಗತಿಗಳನ್ನು ಕ್ರಮವಾಗಿ ಗುರುತಿಸಿಕೊಂಡಿರುತ್ತಾರೆ.

9. ಪ್ರಾಸಾ-1 ಪಿರ್ಯಾದಿ ಸಾಕ್ಷಿ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ 2019 ನೇ ಸಾಲಿನಲ್ಲಿ ಹೊಲದಿಂದ ತಾನು ಎತ್ತಿನ ಬಂಡಿಯನ್ನು ರಸ್ತೆಯ ಎಡಭಾಗದಲ್ಲಿ ಹೊಡೆದು ಕೊಂಡು ಬರುತ್ತಿದ್ದಾಗ, ಹಿಂದಿನಿಂದ ಪೋಲೀಸ ಜೀಪನ ಚಾಲಕ ಆರೋಪಿತನು ಬಂದು ಟಕ್ಕರ ಕೊಟ್ಟಿರುವರು. ಸದರಿ ಅಪಘಾತದಿಂದ ಒಂದು ಎತ್ತು ಸ್ಥಳದಲ್ಲಿ ಮರಣಹೊಂದಿದ್ದು, ಇನ್ನೊಂದು ಎತ್ತು ಎರಡು ದಿನಗಳ ಬಿಟ್ಟು ಮರಣಹೊಂದಿರುವುದಾಗಿ, ಸದರಿ ಅಪಘಾತದಿಂದ ಎತ್ತಿನ ಬಂಡಿಯೂ ಸಹ ಜಖಮ್ ಗೊಂಡಿತ್ತು ಎಂದು. ಸದರಿ ಅಪಘಾತದಿಂದ ತನ್ನ ತಲೆಗೆ, ಎಡ ಭುಜಕ್ಕೆ ಮತ್ತು ಬಲಗಾಲಿಗೆ ಪಟ್ಟುಗಳಾಗಿದ್ದವು ಎಂದು, ಸದರಿ ಗಾಡಿಯ ಚಾಲಕನಾದ ಆರೋಪಿತನ ಹೆಸರು ಈರಣ್ಣ ಇದ್ದು, ಸದರಿ ವಾಹನವನ್ನು ಅತೀವೇಗವಾಗಿ ಮತ್ತು ತೀವ್ರ ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದರು. ನಂತರ ತಾನು ಕೊಪ್ಪಳ ಗ್ರಾ. ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವೆನು ಎಂಬುದಾಗಿ. ನಂತರ ಎರಡನೇ ಎತ್ತು ಮರಣ ಹೊಂದಿದ ನಂತರ ಪುನಃ ತನ್ನನ್ನು ಠಾಣೆಗೆ ಕರೆದಿದ್ದು, ತನ್ನ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುವವರು. ತಾನು ಅಪಘಾತದಿಂದ ಆದ ಗಾಯಗಳಿಗೆ ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವೆನು ಎಂದು ಸಾಕ್ಷಿ ನುಡಿದಿರುತ್ತಾರೆ.

10. ಪ್ರಾಸಾ-2 ಹುಲಗಪ್ಪ ಗುನ್ನಾ ಸ್ಥಳದ ಪಂಚ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಘಟನೆಯ ದಿನದಂದು ಹೊಲದಿಂದ ಮನೆಗೆ ಹೋಗುತ್ತಿದ್ದಾಗ ಪೋಲೀಸರು ಒಂದು ಖಾಲಿ ಹಾಳೆಯ ಮೇಲೆ ಸಹಿ ಪಡೆದಿರುವರು ಆದರೆ ಸಹಿಯನ್ನು ಯಾವ ಕಾರಣಕ್ಕೆ ಪಡೆದರು ಎಂದು ತನಗೆ ಗೊತ್ತಿಲ್ಲ ಎಂದು ನುಡಿದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಗಳಾಗಿರುತ್ತಾರೆ.

11. ಪ್ರಾಸಾ-3 ಮಂಜಪ್ಪ ಗುನ್ನಾ ಸ್ಥಳದ ಪಂಚ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಸದರಿ ಅಪಘಾತವು ತಾನು ಕಣ್ಣಾರೆ

ನೋಡಿರುವುದಿಲ್ಲ. ಸದರಿ ಅಪಘಾತವು ಯಾರಿಗೆ ಯಾವ ಗಾಯಗಳು ಆಗಿರುತ್ತವೆ ಎಂದು ತನಗೆ ತಿಳಿಸಿರುವುದಿಲ್ಲ ಎಂದು ನುಡಿದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಗಳಾಗಿರುತ್ತಾರೆ.

12. ಪ್ರಾಸಾ-4 ಪಿ.ಶಿವಶಂಕರ ಇತರ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ:14.05.2019 ರಂದು ತಾನು ಮತ್ತು ಚಾಸಾ5 ರವರು ತಮ್ಮ ಇಲಾಖೆಯ ಟೆಂಪೋ ಟ್ರಾವೆಲ್ಸ್ ನಂಬರ ಕೆಎ-37/ಜಿ-348 ರಲ್ಲಿ ಆರೋಪಿತನು ಬೆಂಗಾವಲಿಗೆ ಕುರಿತು ಬಾಗಲಕೋಟೆಯ ಜಿಲ್ಲಾ ಕೇಂದ್ರ ಗೃಹಕ್ಕೆ ಹೋಗಿದ್ದು, ಸದರಿ ವಾಹನವನ್ನು ಆರೋಪಿತನು ಚಾಲನೆ ಮಾಡುತ್ತಿದ್ದ ಎಂಬುದಾಗಿ. ಅದೇ ದಿನ ಸಂಜೆ 6-47 ರ ಸುಮಾರಿಗೆ ಕೊಪ್ಪಳಕ್ಕೆ ವಾಪಾಸು ಬರುತ್ತಿದ್ದಾಗ ಕೊಪ್ಪಳ-ಕುಷ್ಟಗಿ ಹಟ್ಟಿ ಕ್ರಾಸ್ ಬಳಿ ಆರೋಪಿತನು ನಿನ್ನ ವಾಹನವನ್ನು ಸುಮಾರು 65 ಕಿ.ಮಿ ವೇಗದಲ್ಲಿ ಓಡಿಸಿಕೊಂಡು ಅತೀವೇಗ ಅಜಾಗರೂಕತೆಯಿಂದ ಓಡಿಸಿಕೊಯಿ ಮುಂದೆ ಹೋಗುತ್ತಿದ್ದ ಎತ್ತಿನ ಗಾಡಿಗೆ ಟಕ್ಕರ ಕೊಟ್ಟು ಅಪಘಾತ ಮಾಡಿರುತ್ತಾರೆ. ನಂತರ ತಾವು ಇಳಿದು ನೋಡಲಾಗಿ ಕಾರಿನ ಬಲಭಾಗವು ಮತ್ತು ಎತ್ತಿನ ಗಾಡಿ ಜಖಮ್ ಗೊಂಡಿತ್ತು ಎಂದು. ಸದರಿ ಎತ್ತಿನ ಗಾಡಿ ಚಲಾಯುಸುತ್ತಿದ್ದ ಶೇಖಪ್ಪನಿಗೆ ಮತ್ತು ಎತ್ತುಗಳಿಗೆ ಗಾಯಗಳಾಗಿದ್ದವು ಎಂದು. ನಂತರ ತಾವು ಮತ್ತು ಚಾಸಾ-6 ರವರು ಸೇರಿ ಶೇಖಪ್ಪನನ್ನು ಕಾರಿನ ಮೂಲಕ ಚಿಕಿತ್ಸೆಗಾಗಿ ಜಿಲ್ಲಾ ಸರಕಾರಿ ಆಸ್ಪತ್ರೆ, ಕೊಪ್ಪಳಕ್ಕೆ ಕರೆದುಕೊಂಡು ಬಂದಿರುವೆವು ಎಂದು. ಮಾರನೇ ದಿನ ಒಂದು ಎತ್ತು ಮರಣಗೊದಿರುವುದಾಗಿ ತಮಗೆ ತಿಳಿಸಿರುವರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

13. ಪ್ರಾಸಾ-5 ಇಬ್ರಾಹಿಂ ಇತರ ಸಾಕ್ಷಿದಾರ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ:14.05.2019 ರಂದು ತಾನು ಮತ್ತು ಚಾಸಾ-4 ರವರು ತಮ್ಮ ಇಲಾಖೆಯ ಟೆಂಪೋ ಟ್ರಾವೆಲ್ಸ್ ನಂಬರ ಕೆಎ-37/ಜಿ-348 ರಲ್ಲಿ ಆರೋಪಿತನ ಬೆಂಗಾವಲಿಗೆ ಕುರಿತು ಬಾಗಲಕೋಟೆಯ ಜಿಲ್ಲಾ ಕೇಂದ್ರ ಗೃಹಕ್ಕೆ

ಹೋಗಿದ್ದು, ಸದರಿ ವಾಹನವನ್ನು ಆರೋಪಿತನು ಚಾಲನೆ ಮಾಡುತ್ತಿದ್ದನು. ಅದೇ ದಿನ ಸಂಜೆ 6-40 ರ ಸುಮಾರಿಗೆ ಕೊಪ್ಪಳಕ್ಕೆ ವಾಪಾಸು ಬರುತ್ತಿದ್ದಾಗ ಕೊಪ್ಪಳ-ಕುಷ್ಟಗಿ ಹಟ್ಟಿ ಕ್ರಾಸ್ ಬಳಿ ಆರೋಪಿತನು ತನ್ನ ವಾಹನವನ್ನು ಸುಮಾರು 65 ಕಿ.ಮಿ ವೇಗದಲ್ಲಿ ಓಡಿಸಿಕೊಂಡು ಅತೀವೇಗ ಅಜಾಗರೂಕತೆಯಿಂದ ಓಡಿಸಿಕೊಯಿ ಮುಂದೆ ಹೋಗುತ್ತಿದ್ದ ಎತ್ತಿನ ಗಾಡಿಗೆ ಟಕ್ಕರ ಕೊಟ್ಟು ಅಪಘಾತ ಮಾಡಿರುತ್ತಾರೆ. ನಂತರ ತಾವು ಇಳಿದು ನೋಡಲಾಗಿ ಕಾರಿನ ಬಲಭಾಗವು ಮತ್ತು ಎತ್ತಿನ ಗಾಡಿ ಜಖಮ್ ಗೊಂಡಿತ್ತು ಎಂದು. ಸದರಿ ಎತ್ತಿನ ಗಾಡಿ ಚಲಾಯುಸುತ್ತಿದ್ದ ಶೇಖಪ್ಪನಿಗೆ ಮತ್ತು ಎತ್ತುಗಳಿಗೆ ಗಾಯಗಳಾಗಿದ್ದವು ಎಂದು. ನಂತರ ತಾವು ಮತ್ತು ಚಾಸಾ-6 ರವರು ಸೇರಿ ಶೇಖಪ್ಪನನ್ನು ಕಾರಿನ ಮೂಲಕ ಚಿಕಿತ್ಸೆಗಾಗಿ ಜಿಲ್ಲಾ ಸರಕಾರಿ ಆಸ್ಪತ್ರೆ, ಕೊಪ್ಪಳಕ್ಕೆ ಕಳುಹಿಸಿರುತ್ತೇವೆ. ಮಾರನೇ ದಿನ ಒಂದು ಎತ್ತು ಮರಣಹೊಂದಿರುವುದಾಗಿ ತಮಗೆ ತಿಳಿಸಿರುವರು ಅಂತ ಸಾಕ್ಷಿ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

14. ಪ್ರಾಸಾ-6 ಡಾ.ಪಾಂಡುರಂಗ ದೊಡ್ಡಮನಿ ಗಾಯದ ವರದಿ ನೀಡಿದ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 4.05.2019 ರಾತ್ರಿ 08-03 ಗಂಟೆಗೆ ಚಾಸಾ-1 ರವರು ವಾಹನ ಅಪಘಾತದ ಹಿನ್ನೆಲೆಯಲ್ಲಿ ಅವರೇ ಸ್ವತಃ ಆಸ್ಪತ್ರೆಗೆ ಬಂದಿದ್ದು, ನಂತರ ತಾನು ಚಾಸಾ-1 ರವರಿಗೆ ತಪಾಸಣೆ ಮಾಡಿದ್ದು, ನಂತರ ಅವರು ದಿನಾಂಕಃ 21.06.2019 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಅಂತ ಸಾಕ್ಷಿ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾಸಾ-7 ರಮೇಶ ಇತರ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಈ ಪ್ರಕರಣದ ಕುರಿತಂತೆ ಯಾವುದೇ ಮಾಹಿತಿ ಇರುವುದಿಲ್ಲ. ತಾನು ಯಾವುದೇ ಹೇಳಿಯನ್ನು ನೀಡಿರುವುದಿಲ್ಲ ಹಾಗೂ ತಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಎಂದು ನುಡಿದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಗಳಾಗಿರುತ್ತಾರೆ.

16. ಪ್ರಾಸಾ–8 ಧರ್ಮರಾಜ ಪವಾರ್ ಎಮ್.ವಿ ವರದಿ ನೀಡಿದ ಸಾಕ್ಷಿದಾರ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಕೊಪ್ಪಳ ಆರ್ ಟಿ ಓ ಕಚೇರಿಯಲ್ಲಿ ಅಗಸ್ಟ್ 2016 ರಿಂದ ಜೂನ್ 2019 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಕೊಪ್ಪಳ ಗ್ರಾಮೀಣಾ ಠಾಣೆಯ ವಿನಂತಿ ಮೇರೆಗೆ ದಿಃ 15–05–2019 ರಂದು ವಾಹನ ನಂ. ಕೆಎ 37 ಜಿ 0348 ನೇದ್ದನ್ನು ಪರಿಶೀಲಿಸಿ ತನ್ನ ವರದಿಯನ್ನು ನೀಡಿರುತ್ತೇನೆ ಎಂಬುದಾಗಿ. ಸದರಿ ವಾಹನಕ್ಕೆ ಕೆಳಗಿನ ಜಾಕಂ ಆಗಿರುವುದು ಕಂಡು ಬಂದಿರುತ್ತವೆ. ಸದರಿ ವಾಹನಕ್ಕೆ ಮುಂದಿನ ಬಂಪರ್ ಜಕಾಂಗೊಂಡಿತ್ತು, ರೇಡಿಯೊಟರ್ ಮತ್ತು ಬಾಂಡರೇಟರ್, ಎರಡು ಹೆಡ್ ಲೈಟಿ ಮತ್ತು ಇಂಡಿಕೇಟರ್ ಗಳು, ಮುಂದಿನ ಎಡಗಡೆ ಚಕ್ರದ ಮಡ್ ಗಾರ್ಡ, ಮುಂದಿನ ಎಡಭಾಗದ ಬಾಗಿಲು, ವಿಂಡಿಸ್ ಸ್ಕ್ರೀನ್ ಗ್ಲಾಸ್ ಇವುಗಳು ಜಕಾಂಗೊಂಡಿದ್ದವು ಎಂದು. ತನ್ನ ಅಬಿಪ್ರಾಯದ ಪ್ರಕಾರ ಸದರಿ ವಾಹನದ ಬ್ರೆಕ್ ಸಿಸ್ಟೀಮ ಪರೀಕ್ಷೆ ಮಾಡಲಾಗಿ ವಾಹನ ಸುಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ಸದರಿ ಅಪಘಾತ ವಾಹನದ ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಮತ್ತು ವಾಹನಕ್ಕೆ ಯಾವುದೇ ಜಾಕಂಗಳು ಅಪಘಾತದಿಂದ ಆಗಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ನಾನು ವರದಿಯನ್ನು ನೀಡಿರುತ್ತೇನೆ ಅಂತ ಸಾಕ್ಷಿ ನುಡಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

17. ಪ್ರಾಸಾ–9 ಗಣೇಶ ಕಣಗಿ ಇತರ ಸಾಕ್ಷಿ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಕೊಪ್ಪಳ ಗ್ರಾಮೀಣ ಪೊಲೀಸ ಠಾಣೆಯಲ್ಲಿ 2017 ರಿಂದ 2019 ಆಗಸ್ಟ ವರೆಗೆ ಕೆಲಸ ಮಾಡಿರುತ್ತೇನೆ. ಮೃತ ಚಾಸಾ–10 ರವರೊಂದಿಗೆ ತಾನು 2017 ರಿಂದ 2019 ರವರೆಗೆ ಕೆಲಸ ಮಾಡಿರುತ್ತೇನೆ. ಚಾಸಾ–10 ರವರ ಸಹಿ ಮತ್ತು ಬರವಣಿಗಳನ್ನು ತಾನು ಗುರುತಿಸಬಲ್ಲೆ. ನಿಪಿ–1 ರಿಂದ 7 ರಲ್ಲಿರುವ ತನಿಖಾಧಿಕಾರಿ ಸಹಿಗಳು ಚಾಸಾ–10 ರವರ ಸಹಿಗಳಾಗಿರುತ್ತವೆ. ಚಾಸಾ–10 ರವರು ಈ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಆರೋಪಿ

ಸರ್ಕಾರಿಕೆಲಸದಲ್ಲಿದ್ದ ಕಾರಣಕ್ಕೆ ಎಸ್ ಪಿ ಕಚೇರಿಯಿಂದ ವಿಚಾರಣೆಗೆ ಪರವಾನಿಗೆ ಪಡೆದಿದ್ದು, ಸದರಿ ಪರವಾನಿಗೆಗೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

18. ಈ ಪ್ರಕರಣದಲ್ಲಿ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337ರ ಅಡಿಯಲ್ಲಿ ದೂರು ಸಲ್ಲಿಸಲಾಗಿದ್ದು, ಈ ಪ್ರಕರಣವು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಕೊಪ್ಪಳ-ಕುಷ್ಟಗಿ ರಸ್ತೆಯ ಹಟ್ಟಿ ಕ್ರಾಸ ಹತ್ತಿರ ದಿನಾಂಕ 14.05.2019 ರಂದು ಸಾಯಂಕಾಲ 06-40 ಗಂಟೆಯ ಸುಮಾರಿಗೆ ಆರೋಪಿತನು ತನ್ನ ಸರ್ಕಾರಿ ಪೋಲೀಸ್ ವಾಹನ ಸಂಖ್ಯೆಃ ಕೆಎ-37/ಜಿ-0348 ನೇದ್ದರಲ್ಲಿ ಚಾಸಾ-4, 5 ರವರು ಕೂಡಿಸಿಕೊಂಡು ಇರಕಲಗಡಾ ಕಡೆಯಿಂದ ಕೊಪ್ಪಳ ಕಡೆಗೆ ಅತೀವೇಗ ಮತ್ತು ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೊರಟಿದ್ದ ಚಾಸಾ-1 ರವರ ಎತ್ತಿನ ಬಂಡಿಯ ಹಿಂದೆ ಅಂತರವನ್ನು ಕಾಯ್ದುಕೊಳ್ಳದೆ ಹಿಂಬದಿಗೆ ಜೋರಾಗಿ ಅಪಘಾತ ಮಾಡಿದ್ದರಿಂದ ಚಾಸಾ-1 ರವರಿಗೆ ಸಾದಾ ಸ್ವರೂಪದ ಗಾಯವಾಗಿದ್ದು ಮತ್ತು ಈ ಅಪಘಾತದಲ್ಲಿ ಎತ್ತಿನ ಬಂಡಿಗೆ ಹೂಡಿದ್ದ ಒಂದು ಎತ್ತು ಸಹ ಮೃತಪಟ್ಟಿದೆ ಎಂದು ಆರೋಪ ಮಾಡಲಾಗಿದ್ದು ಇರುತ್ತದೆ. ಸದರಿ ಎತ್ತುಗಳು ಮರಣ ಹೊಂದಲು ಮತ್ತು ಬಂಡಿಯ ಸವಾರ ಗಾಯಗೊಳ್ಳಲು ಆರೋಪಿಯ ಅತೀವೇಗ ಅಜಾಗರೂಕತೆ ವಾಹನ ಚಾಲನೆಯಿಂದ ಆಗಿರುತ್ತದೆ ಎಂದು ಸಾಬೀತುಪಡಿಸಲು ಅಭಿಯೋಜಕರು ಒಟ್ಟು 9 ಸಾಕ್ಷ್ಯಗಳನ್ನು ವಿಚಾರಣೆಗೆ ಒಳಪಡಿಸಿದ್ದು ಅದರಲ್ಲಿ ಪ್ರಾಸಿಕ್ಯೂಷನ್ ವಿಚಾರಣೆ ಮಾಡಿಕೊಂಡ ಸಾಕ್ಷಿಗಳ ಪೈಕಿ ಪಿಡಬ್ಲ್ಯೂ-1 ಫಿರ್ಯಾದಿ ಆಗಿದ್ದು ಅಪಘಾತದಲ್ಲಿ ತಾನು ಗಾಯಗೊಂಡಿದ್ದು ತನ್ನ ಬಂಡಿಗೆ ಆರೋಪಿ ಪೋಲೀಸ್ ಇಲಾಖ ವಾಹನವನ್ನು ಚಲಾಯಿಸಿಕೊಂಡು ಡಿಕ್ಕಿಪಡಿಸಿದ್ದು ಅದರ ವೇಗವನ್ನು ತಾನು ಗಮನಿಸಿರುವುದಿಲ್ಲ ಆದರೆ ಅಪಘಾತದ ಪರಿಣಾಮ ತನ್ನ ಎರಡು ಎತ್ತುಗಳು ಮೃತಹೊಂದಿರುತ್ತವೆ

ಎಂದು ನುಡಿಯುತ್ತಾನೆ ಮತ್ತು ತಾನು ತನ್ನ ಬಂಡಿಯನ್ನು ರಸ್ತೆಯ ಎಡಬದಿಯಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದೆ ಎಂದು ನುಡಿಯುತ್ತಾನೆ. ಪಾಟೀಸವಾಲಿನಲ್ಲಿ ಅಪಘಾತವಾದ ನಂತರ ತಾನು ಮೂರ್ಛೆ ಹೋಗಿದ್ದು ಮತ್ತು ಒಂದು ಎತ್ತು ಘಟನಾ ಸ್ಥಳದಲ್ಲಿ ಮೃತಹೊಂದಿದ್ದು ಮತ್ತು ಇನ್ನೊಂದು ಎತ್ತು ಅಪಘಾತವಾದ ಎರಡು ದಿನಗಳ ನಂತರ ಮೃತಹೊಂದಿರುವುದಾಗಿ ನುಡಿಯುತ್ತಾನೆ ಮತ್ತು ತಾನು ಈ ಹಂತದಲ್ಲಿ ಅಪಘಾತ ಸ್ಥಳದ ಪಂಚನಾಮೆಯನ್ನು ಪರಿಶೀಲಿಸಿದಾಗ ಅಪಘಾತ ರಸ್ತೆಯ ಯಾವ ಸ್ಥಳದಲ್ಲಿ ಆಗಿರುತ್ತದೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ತಿಳಿದುಕೊಳ್ಳಲು ಎಲ್ಲಾ ದಾಖಲಾತಿಗಳನ್ನು ಪರಿಶೋದಿಸಿದಾಗ ತನಿಖಾಧಿಕಾರಿ ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿ ಹಾಜರುಪಡಿಸಿರುವುದಿಲ್ಲ ಅದಲ್ಲದೇ ತನಿಖಾಧಿಕಾರಿ ತಾನು ಈ ಪ್ರಕರಣದ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮಾಡಿರುವುದಾಗಿ ನುಡಿದಿದ್ದರೂ ಸಹ ಸದರಿ ಪಂಚನಾಮೆ ಸಾಕ್ಷಿಗಳು ಅಭಿಯೋಜಕರ ಹಿತಾಸಕ್ತಿಯಲ್ಲಿ ಸಾಕ್ಷ್ಯ ನುಡಿದಿರುವುದಿಲ್ಲ. ಆ ಕಾರಣಕ್ಕೆ ತನಿಖಾಧಿಕಾರಿ ಮಾಡಿರುವ ಪಂಚನಾಮೆ ಸಂಶಾತೀತವಾಗಿ ರುಜುವಾತು ಆಗಿರುವುದಿಲ್ಲ, ಇನ್ನಿಬ್ಬರು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರು ತಾನು ಅಪಘಾತಪಡಿಸಿದ ಇಲಾಖಾ ವಾಹನದ ಒಳಗೆ ಕುಳಿತುಕೊಂಡು ಚಲಿಸುತ್ತಿದ್ದು ಆರೋಪಿ ತನ್ನ ವಾಹನವನ್ನು ವೇಗದಲ್ಲಿ ಓಡಿಸಿಕೊಂಡು ಮುಂದೆ ಹೋಗುತಿದ್ದ ಎತ್ತಿನ ಗಾಡಿಗೆ ಕುಷ್ಟಗಿ-ಹಟ್ಟಿ ಕ್ರಾಸ್ ಬಳಿ 06 ಗಂಟೆ 40 ನಿಮಿಷಕ್ಕೆ ಡಿಕ್ಕಿಪಡಿಸಿದ್ದು ಆತನು ಚಾಸಾ-1 ರವರು ಆರೋಪಿ ವಿರುದ್ದ ಮಾಡಿದ ಅಪಾದನೆಗೆ ಪುಷ್ಟೀಕರಿಸಿ ಸಾಕ್ಷ ನುಡಿದಿರುತ್ತಾರೆ. ನಂತರ ಚಾಸಾ-8 ರವರು ವೈದ್ಯರಾಗಿದ್ದು ತಾವು ಚಾಸಾ-1 ರವರಿಗೆ ನೀಡಿದ ಚಿಕಿತ್ಸೆ ಬಗ್ಗೆ ನುಡಿದಿರುತ್ತಾರೆ. ಚಾಸಾ-7 ರವರು ಅಭಿಯೋಜಕರ ಹಿತಾಸಕ್ತಿಯಲ್ಲಿ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಮತ್ತು ಚಾಸಾ-8 ರವರು ವಾಹನ ಪರಿಶೀಲನಾ ಅಧಿಕಾರಿಯಾಗಿದ್ದು ಅಪಘಾತಪಡಿಸಿದ ವಾಹನಕ್ಕೆ ಯಾವುದೇ ತಾಂತ್ರಿಕ ದೋಷವಿರಲಿಲ್ಲ ಎಂದು ನುಡಿದಿದ್ದು, ನಂತರ ಇನ್ನೊಬ್ಬ ಸಾಕ್ಷಿ ಗಣೇಶ ಕಣಗಿ ಇವನು ಕೊಪ್ಪಳ ಗ್ರಾಮೀಣ ಪೋಲೀಸ್ ಠಾಣೆಯ

ಮುಖ್ಯ ಪೇದೆಯಾಗಿದ್ದು ತಾನು ಮೃತ ಚಾಸಾ–10 ರವರೊಂದಿಗೆ 3 ವರ್ಷಗಳ ಕಾಲ ಕೆಲಸ ಮಾಡಿದ್ದು ಚಾಸಾ–10 ರವರು ಈ ಪ್ರಕರಣದಲ್ಲಿ ಮಾಡಿದ ತನಿಖಾ ಬಗ್ಗೆ ಮತ್ತು ತಯಾರಿಸಿದ ದಾಖಾಲಾತಿಗಳಲ್ಲಿ ಇರುವ ಚಾಸಾ–10 ರವರ ಸಹಿಗಳನ್ನು ಅವರ ಸಲ್ಲಿಸಿದ ದಾಖಲಾತಿಗಳಾದ ನಿಪಿ–1 ರಿಂದ 7 ರಲ್ಲಿ ಇರುವ ಚಾಸಾ–10 ರವರ ಸಹಿಗಳನ್ನು ನೋಡಿ ನಿಪಿ–1 ಎ ರಿಂದ ನಿಪಿ–7 ಎ ಎಂದು ಗುರುತಿಸಿರುತ್ತಾರೆ ಇದರಲ್ಲಿ ಚಾಸಾ–10 ರವರು ಆರೋಪಿ ಸರ್ಕಾರಿ ನೌಕರನಾಗಿದ್ದ ಕಾರಣಕ್ಕೆ ಅವರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಲು ತಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ಅಂದರೆ ಜಿಲ್ಲಾ ಪೋಲೀಸ್ ಅಧಿಕಾರಿಯವರ ಬಳಿ ನಿಪಿ–9 ರಂತೆ ಮನವಿ ಸಲ್ಲಿಸಿ ನಿಪಿ–10 ರಂತೆ ಪರವಾನಿಗೆ ಪಡೆದು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ–1 ರವರು ಹಾಗೂ ಚಾಸಾ–4 ಮತ್ತು 5 ರವರ ಹೇಳಿಕೆಗಳ ಮೇರೆಗೆ ಆರೋಪಿ ತನ್ನ ವಾಹನವನ್ನು ಅತೀವೇಗ ಅಜಾಗರೂಕತೆಯಿಂದ ಚಾಲನೆ ಮಾಡಿ ಒಂದು ಎತ್ತುಗಳ ಬಂಡಿಗೆ ಹಿಂದೆಯಿಂದ ಡಿಕ್ಕಿಪಡಿಸಿರುವುದು ಸಾಬೀತಾಗಿರುತ್ತದೆ. ಆ ಕಾರಣಕ್ಕೆ ಆರೋಪಿಯ ವಿರುದ್ಧ ಮಾಡಿದ ಐ.ಪಿ.ಸಿ ಕಲಂ 279 ಮತ್ತು 337 ರ ಅಡಿಯಲ್ಲಿ ಅಭಿಯೋಜಕರು ಸಂಶಾತೀತವಾಗಿ ರುಜುವಾತುಪಡಿಸುವಲ್ಲಿ ಸಫಲರಾಗಿದ್ದು ಆರೋಪಿಯನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿದೆ ಕಾರಣ ಆತನು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ತಾನು ಒಂದು ಜವಾಬ್ದಾರಿಯುತ ವ್ಯಕ್ತಿಯಾಗಿ ಮತ್ತು ಸಮಾಜದ ರಕ್ಷಣಾದಳದಲ್ಲಿ ಕೆಲಸಗಾರನಾಗಿದ್ದರೂ ಸಹ ಸಾರ್ವಜನಿಕರಿಗೆ ಅಸುರಕ್ಷತೆವಾಗುವ ರೀತಿಯಲ್ಲಿ ಅಪಘಾತಮಾಡಿದ್ದಕ್ಕೆ ನಾನು ಆರೋಪಿಯನ್ನು ದೋಶಿ ಎಂದು ತಿರ್ಮಾನಿಸಿ ದಂಡ ವಿದಿಸಿ ಅಂಶ **1** ನ್ನು ಸಕರಾತ್ಮಕವಾಗಿ ಉತ್ತರಿಸಿ ಅಂಶ 2 ಕ್ಕೆ ಈ ಕೆಳಗಿನಂತೆ ಆದೇಶ ಮಾಡಿರುತ್ತೇನೆ.

19. <u>ಅಂಶ **2**:</u> ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (2)ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾ ಆರೋಪಿ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 337ರ ಅಡಿಯಲ್ಲಿನ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿರುತ್ತಾನೆಂದು ನಿರ್ಣಯಿಸಿ ದೋಷಿಯೆಂದು ತೀರ್ಮಾನಿಸಿ ಸದರಿ ಆಪಾದನೆಗಳಿಗೆ ಆತನ್ನು ಶಿಕ್ಷೆಗೆ ಗುರಿಪಡಿಸಿ ಈ ಕೆಳಗಿನಂತೆ ದಂಡ ವಿಧಿಸಲಾಗಿರುತ್ತದೆ.

ಆರೋಪಿತನಿಗೆ ಭಾರತೀಯ ದಂಡ ಸಂಹಿತೆ ಕಲಂ 279ರ ಅಡಿಯಲ್ಲಿ ರೂ.1,000/- ದಂಡ ಮತ್ತು ಭಾರತೀಯ ದಂಡ ಸಂಹಿತೆ ಕಲಂ 337ರ ಅಡಿಯಲ್ಲಿ ರೂ.500/- ದಂಡ ವಿದಿಸಲಾಗಿದೆ. ಆರೋಪಿತನು ವಿದಿಸಿದ ದಂಡವನ್ನು 15 ದಿನಗಳೊಳಗೆ ಭರಿಸಲು ವಿಫಲನಾದರೆ ಆರೋಪಿ 6 ತಿಂಗಳು ಸೆರೆವಾಸವನ್ನು ಅನುಭವಿಸಬೇಕು.

ಆರೋಪಿಯಿಂದ ವಸೂಲಿ ಮಾಡಲಾದ ದಂಡವನ್ನು ಸರ್ಕಾರದ ಖಜಾನೆಗೆ ಭರಿಸುವುದಾಗಿ ಕಚೇರಿಗೆ ಆದೇಶಿಸಲಾಗಿದೆ.

ಆದೇಶದ ಒಂದು ಪ್ರತಿಯನ್ನು ಮುಕ್ತವಾಗಿ ಆರೋಪಿಗೆ ನೀಡಲು ಕಚೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿ:22ನೇ ಜೂನ್ - 2026 ರಂದು ಆದೇಶವನ್ನು ಘೋಷಿಸಲಾಯಿತು.)

**sd/**
**(ಶ್ರೀಮತಿ ತ್ರಿವೇಣಿ ಈರಗಾರ)**
**1**ನೇ ಹೆ.ಪ್ರ.ದ ಸಿವಿಲ್ ನ್ಯಾಯಾಧೀಶರು
**&** ಜೆ.ಎಂ.ಎಫ್.ಸಿ., ಕೊಪ್ಪಳ.

<u>ಅನುಬಂಧ</u>

| ಅಭಿಯೋಜಕರ ಸಾಕ್ಷಿ | ವಿಚಾರಣಾ ಸಾಕ್ಷಿ | ಸಾಕ್ಷಿ ಹೆಸರು | ಪದನಾಮ | ಗುರುತಿಸಿದ ದಾಖಲಾತಿಗಳು |
|---|---|---|---|---|
| ಚಾಸಾ.1 | ಪ್ರಾ.ಸಾ.1 | ಶೇಖಪ್ಪ | ದೂರುದಾರ | ನಿಪಿ-1 : ದೂರು<br>ನಿಪಿ-1(ಎ) : ಸಹಿ |

| | | | | |
|---|---|---|---|---|
| ಚಾಸಾ.2 | ಪ್ರಾ.ಸಾ.2 | ಹುಲಗಪ್ಪ | ಸ್ಥಳ ಪಂಚ ಸಾಕ್ಷಿ | ನಿಪಿ–2 : ಪಂಚನಾಮೆ<br>ನಿಪಿ–2(ಎ) : ಸಹಿ |
| ಚಾಸಾ.3 | ಪ್ರಾ.ಸಾ.3 | ಮಂಜಪ್ಪ | ಸ್ಥಳ ಪಂಚ ಸಾಕ್ಷಿ | ನಿಪಿ–2 : ಪಂಚನಾಮೆ<br>ನಿಪಿ–2(ಎ) : ಸಹಿ |
| ಚಾಸಾ.4 | ಪ್ರಾ.ಸಾ.4 | ಪಿ.ಶಿವಶಂಕರ | ಇತರಸಾಕ್ಷಿ | |
| ಚಾಸಾ.5 | ಪ್ರಾ.ಸಾ.5 | ಇಬ್ರಾಹಿಂ | ಇತರಸಾಕ್ಷಿ | |
| ಚಾಸಾ.8 | ಪ್ರಾ.ಸಾ.6 | ಡಾ. ಪಾಂಡುರಂಗ ದೊಡ್ಡಮನಿ | ಗಾಯದ ವರದಿ ನೀಡಿದ ವೈದ್ಯ ಸಾಕ್ಷಿ | ನಿಪಿ–3 : ಗಾಯದ ಪ್ರಮಾಣ ಪತ್ರ<br>ನಿಪಿ–3(ಎ) : ಸಹಿ |
| ಚಾಸಾ.6 | ಪ್ರಾ.ಸಾ.7 | ರಮೇಶ | ಇತರಸಾಕ್ಷಿ | ನಿಪಿ–4 : ಹೇಳಿಕೆ |
| ಚಾಸಾ.7 | ಪ್ರಾ.ಸಾ.8 | ಧರ್ಮರಾಜ ಪವಾರ್ | ಎಮ್.ವಿ ವರದಿ ನೀಡಿದ ಸಾಕ್ಷಿ | ನಿಪಿ–5 : ಐ.ಎಮ್.ವಿ ವರದಿ<br>ನಿಪಿ–5(ಎ) : ಸಹಿ |
| | ಪ್ರಾ.ಸಾ.9 | ಗಣೇಶ ಕಣಗಿ | ಚಾಸಾ–10 ರವರ ಸಹಿ ಗುರುತಿಸಿದವರು | ನಿಪಿ–8 :ಪಿ.ಎಮ್ ವರದಿ<br>ನಿಪಿ–8(ಎ) : ಸಹಿ<br>ನಿಪಿ–9 : ಅಂತಿಮ ವರದಿ ಸಲ್ಲಿಸಲು ಮನವಿ<br>ನಿಪಿ–9(ಎ) : ಸಹಿ<br>ನಿಪಿ–10 : ಅಭಿಯೋಜನೆಗೆ ಒಳಪಡಿಸಲು ಕೋರಿ ಸಲ್ಲಿಸಿದ ಪತ್ರ<br>ನಿಪಿ–10(ಎ) : ಸಹಿ |

ಆರೋಪಿ ಪರ ವಕೀಲರ ಒಪ್ಪಿಗೆ ಮೇರೆಗೆ ಗುರುತಿಸಿರುವ ದಾಖಲೆಗಳು

ನಿಪಿ–6–ಮರಣೋತ್ತರ ವರದಿ

ನಿಪಿ–6(ಎ) : ಸಹಿ

ನಿಪಿ–7–ಇನ್‌ಕ್ವೇಸ್ಟ್ ವರದಿ

ನಿಪಿ–7(ಎ) : ಸಹಿ

<u>***1.*** ಆರೋಪಿತರ ಪರ ವಿಚಾರಿಸಲಾದ ಸಾಕ್ಷಿಗಳು **:**</u>

– ಇಲ್ಲಾ –

***2.*** <u>ಆರೋಪಿತರ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ :</u>

– ಇಲ್ಲಾ –

***3.*** <u>ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿ</u>

- ಇಲ್ಲಾ -

**sd/**
(ಶ್ರೀಮತಿ ತ್ರಿವೇಣಿ ಈರಗಾರ)
1 ನೇ ಹೆ.ಪ್ರ.ದ ಸಿವಿಲ್ ನ್ಯಾಯಾಧೀಶರು
& ಜೆ.ಎಂ.ಎಫ್.ಸಿ., ಕೊಪ್ಪಳ.